# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 697 |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12/07/2023 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಧಾನಸೌಧದ ಪ್ರವೇಶ ದ್ವಾರದಲ್ಲಿ ಪೊಲೀಸರು ಕೂರಲು ಇರುವ ತಾತ್ಕಾಲಿಕ ಶೆಡ್ ನಿರ್ಮಾಣ ವಿಧಾನಸೌಧದ ಭವ್ಯತೆ ಸೌಂದರ್ಯಕ್ಕೆ ಕುಂದು ತರುವ ರೀತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ತಾತ್ಕಾಲಿಕ ಶೆಡ್ ಬದಲು ಕಲಾತ್ಮಕ ರೀತಿಯ ಶಾಶ್ವತ ಶೆಡ್ ನಿರ್ಮಾಣ ಮಾಡಲು ಸರ್ಕಾರ ಇಚ್ಛಿಸಿದೆಯೇ; ಇಚ್ಛಿಸಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ನಿರ್ಮಿಸಲಾಗುವುದು; | ವಿಧಾನಸೌಧ ಪ್ರವೇಶದ್ವಾರದಲ್ಲಿ ಪೊಲೀಸರು ಕೂರಲು ತಾತ್ಕಾಲಿಕ ಶೆಡ್ ಗಳನ್ನು ನಿರ್ಮಿಸಲಾಗಿರುತ್ತದೆ. ಕಲಾತ್ಮಕ ರೀತಿಯ ಶಾಶ್ವತ ಶೆಡ್ ನಿರ್ಮಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಆ) | ಸದರಿ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿ ಎಷ್ಟು ವರ್ಷಗಳಾಗಿವೆ; ತಾತ್ಕಾಲಿಕ ಶೆಡ್ ನಿರ್ಮಾಣವಾದಾಗಿನಿಂದ ಇಲ್ಲಿಯವರೆಗೆ ಪಾವತಿಸಿರುವ ಬಾಡಿಗೆ ಎಷ್ಟು; (ವರ್ಷವಾರು ನೀಡುವುದು) | ವಿಧಾನಸೌಧದ ಪಶ್ಚಿಮ ದ್ವಾರದ ಶೆಡ್‌ನ್ನು ಲೋಕೋಪಯೋಗಿ ಇಲಾಖೆಯಿಂದ 2021ರಲ್ಲಿ ನಿರ್ಮಿಸಲಾಗಿದ್ದು, ಇನ್ನುಳಿದ ಶೆಡ್ ಗಳು ಹತ್ತು ವರ್ಷ ಹಳೆಯದಾಗಿರುತ್ತದೆ. ಸದರಿ ಶೆಡ್ ನಿರ್ಮಾಣವಾದಾಗಿನಿಂದ ಇಲ್ಲಿಯವರೆಗೆ ಯಾವುದೇ ಬಾಡಿಗೆ ಪಾವತಿಸಿರುವುದಿಲ್ಲ. |
| ಇ) | ವಿಧಾನಸೌಧದ ಕಟ್ಟಡದ ಮಧ್ಯಭಾಗದಲ್ಲಿ ಎಳೆದಿರುವ ವಿದ್ಯುತ್ ವೈರ್ ಮತ್ತು ಇತರೆ ಪೈಪ್ ಗಳು ಕಟ್ಟಡದ ಸೌಂದರ್ಯಕ್ಕೆ ಧಕ್ಕೆಯುಂಟು ಮಾಡುವುದಿಲ್ಲವೇ; ಸದರಿ ಪೈಪ್ ಮತ್ತು ವೈರ್ ಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು? | ವಿಧಾನಸೌಧದ ಕಟ್ಟಡದ ಮಧ್ಯಭಾಗದಲ್ಲಿ ಯಾವುದೇ ವಿದ್ಯುತ್ ವೈರ್ ಗಳು, ಇರುವುದಿಲ್ಲ, ಸಿಸಿಟಿವಿ ವ್ಯವಸ್ಥೆಯ ವೈರ್ ಗಳು, ಲ್ಯಾನ್ ನೆಟ್ ವರ್ಕಿಂಗ್ ಕೇಬಲ್ ಗಳು ಮತ್ತು ಟೆಲಿಫೋನ್ ಕೇಬಲ್‌ಗಳು ಮತ್ತು ಪೈಪುಗಳು ಇ-ಆಡಳಿತ ಇಲಾಖೆ, ದೂರ ಸಂಪರ್ಕ ಇಲಾಖೆಗೆ ಸಂಬಂಧಪಟ್ಟಿರುತ್ತದೆ. (ಸದರಿ ವೈರ್ ಗಳನ್ನು ಸರಿಪಡಿಸಲು ಸಿ.ಆ.ಸು ಇಲಾಖೆಯ ಸಮನ್ವಯದೊಂದಿಗೆ ಕ್ರಮ ವಹಿಸಲಾಗುವುದು). |

**ಸಂಖ್ಯೆ: ಲೋಇ 28 ಬಿಎಲ್ ಕ್ಯೂ 2023**

(ಸತೀಶ್ ಜಾರಕಿಹೊಳಿ)

ಮಾನ್ಯ ಲೋಕೋಪಯೋಗಿ ಸಚಿವರು.